ತಪೋನಿರತರಾಗಿದ್ದ ಶ್ರೀಗಳಿಗೆ ಕಸಪೊರಕೆಯಿಂದ ಹೊಮ್ಮುತ್ತಿದ್ದ ಪರ ಪರ ಶಬ್ದ ಎಂದಿನಂತಿರದಿದ್ದು ಧ್ಯಾನಾವಸ್ಥೆಯಲ್ಲೆ ಪತ್ತೆಯಾಗಿ ಅಂದು ಧ್ಯಾನ ಪೀಠದಿಂದ ಬಿಡಿಸಿಕೊಂಡು ಬೇಗನೆ ಆಚೆ ಬಂದಿದ್ದರು. ಅವಸರವಸರವಾಗಿ ಬಂದ ಶ್ರೀಗಳಿಗೆ ಮೊದಲು ಕಂಡದ್ದು ಅಂಗಳದಲ್ಲಿ ತನ್ಮಯತೆಯಿಂದ ಕೆಲಸದಲ್ಲಿ ತಲ್ಲೀನಳಾಗಿದ್ದ ರತ್ನಮ್ಮಳೆ! ಶ್ರೀಗಳು ಆಕೆಯೆಡೆಗೆ ಮುಗುಳ್ನಗೆ ಚೆಲ್ಲಿದರಾದರೂ... ಅವರ ಸುಪ್ತ ಮನಸ್ಸು ಮಗಳು ಅವ್ವನಂತೆ ಎಣ್ಣೆಗೆಂಪಗಿರದೆ ಕಪ್ಪಗಿದ್ದರೂ... ಮೈಕೈತುಂಬಿಕೊಂಡು ಮಜಬೂತಾಗಿದ್ದಾಳೆ ಎಂಬ ಲೆಕ್ಕಾಚಾರವೇ ಆಗಿತ್ತು. ರತ್ನ ಶ್ರೀಗಳನ್ನು ಕಂಡದ್ದೆ ಮಾಡುವ ಕೆಲಸ ತಡೆದು ಓಡಿ ಬಂದು ದಾರಿಗೆ ಎರಗಿದಳು. ಶ್ರೀಗಳು ತಡಮಾಡದೆ ತಮ್ಮಿಚ್ಛೆಯಂತೆ ಭುಜ ಹಿಡಿದು ಸವರಿ ಮೇಲಕ್ಕೆತ್ತಿದರು. ಶ್ರೀಗಳ ಈ ಅಪರೂಪದ ನಡೆಯಿಂದ ಚಕಿತಗೊಂಡ ರತ್ನ ಹಿಂದೆ ಸರಿದು ಸೆರಗು ಬಿಗಿಗೊಳಿಸಿಕೊಂಡು ತಲೆಬಾಗಿ ನಿಂತು, ಶ್ರೀಗಳು ಕೇಳಿದ ಅವ್ವನ ಬಗೆಗಿನ ಕುಶಲೋಪರಿ ಪ್ರಶ್ನೆಗಳಿಗೆ ಉತ್ತರವಾದಳು.

